ಬಟ್ಟೆ ಹಾಕಿಕೊಂಡು ಬರುವುದು, ಬಡವರ ಮಕ್ಕಳು ಹರಕಲು ಬಟ್ಟೆ ಹಾಕಿಕೊಂಡು ಬರುವುದು ಆದರೆ ಅದರಲ್ಲಿ ತಾರತಮ್ಯ ಕಾಣುತ್ತದೆ. ಅವರ ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಎಲ್ಲರೂ ಸಮಾನರಾಗಬೇಕು ಎನ್ನುವ ಸದುದ್ದೇಶದಿಂದ ಆಗ ಅದನ್ನು ಟೀಕೆ ಮಾಡಿದ್ದು. ಆದರೆ ಅದೊಂದು ಮಹತ್ವಾಕಾಂಕ್ಷೆಯ ಯೋಜನೆ. ಆದರೆ ಈಗ ತಾವು ತರುತ್ತಿರತಕ್ಕಂಥಾದ್ದನ್ನು ನೋಡಿ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಸೋಮಶೇಖರ್‌ರವರ ಬಗ್ಗೆಯಾಗಲೀ ಅಥವಾ ಯಾರೇ ವಿರೋಧ ಪಕ್ಷದ ನಾಯಕರ ಬಗ್ಗೆಯಾಗಲೀ ಅಥವಾ ಆಗ ಮಾಡಿದಂಥ ಕಾರ್ಯಕ್ರಮದ ಬಗ್ಗೆಯಾಗಲೀ ಕೆಟ್ಟ ಭಾವನೆ ಇಲ್ಲ.

ಛೇರ್ಮನ್ : ಮಾನ್ಯ ಯಾವಗಲ್‌ರವರೇ, ನೀವು ಚರ್ಚೆಯನ್ನು ನಾಳೆ ಮುಂದುವರೆಸಿ, ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನ ಪುನಃ ನಾಳೆ ಬೆಳಿಗ್ಗೆ 10.30ಕ್ಕೆ ಸೇರುವುದು.

(ಸದನವು ಸಂಜೆ 7 ಗಂಟೆ 32 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 1ನೇ ಆಗಸ್ಟ್ 2003ರ ಶುಕ್ರವಾರದಂದು ಬೆಳಿಗ್ಗೆ 10 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

(+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

6. ಅನುಬಂಧ – I

ಉತ್ತರ ಕರ್ನಾಟಕ ಪ್ರದೇಶದಲ್ಲಿ ಗಂಗಾ ಕಲ್ಯಾಣ ಯೋಜನೆಯ ಅನುಷ್ಠಾನ

4139 (4918) : ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ (ಸಂಕೇಶ್ವರ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕರ್ನಾಟಕದ ಪ್ರದೇಶದಲ್ಲಿ ಅಂತರ್ಜಲದ ಮಟ್ಟ ಕಡಿಮೆಯಾಗಿ ತುಂಬಾ ಆಳವಾಗಿ ಕೊಳವೆಬಾವಿಗಳನ್ನು ಕೊರೆಯಬೇಕಾಗಿರುವುದರಿಂದ ಗಂಗಾ ಕಲ್ಯಾಣ ಯೋಜನೆಗೆ ನಿಗದಿ ಪಡಿಸಿರುವ ಘಟಕವೆಚ್ಚವನ್ನು ಹೆಚ್ಚಿಗೆ ಮಾಡುವುದರ ಬಗ್ಗೆ ಸರ್ಕಾರ ಯೋಚಿಸಿದೆಯೇ;

ಆ) ಹಾಗಿದ್ದಲ್ಲಿ, ಇದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಹೌದು

ಆ) ಪ್ರಸ್ತಾಪನೆಯು ರಾಜ್ಯ ಸರ್ಕಾರದ ಪಕ್ರಿಯೆ ಪರಿಶೀಲನೆಯಲ್ಲಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಗುರುತಿಸಿದ ಖನಿಜ ಅನ್ವೇಷಣೆಯ ಮಾಹಿತಿ

4142 (4780) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಇಲಾಖೆಯ ಖನಿಜ ಅನ್ವೇಷಣಾ ವಿಭಾಗವು ಶಿವಮೊಗ್ಗ ಜಿಲ್ಲೆಯಲ್ಲಿ ಗುರುತಿಸಿದ ಖನಿಜಗಳು ಯಾವುವು;

ಆ) ಯಾವ ತಾಲ್ಲೂಕಿನ ಯಾವ ಸ್ಥಳಗಳಲ್ಲಿ ಈ ಖನಿಜಗಳನ್ನು ಗುರುತಿಸಲಾಗಿದೆ;

ಇ) ಈ ಗಣಿಗಳ ಗುತ್ತಿಗೆಗಾಗಿ ಬಂದ ಅರ್ಜಿಗಳೆಷ್ಟು; ಮಂಜೂರಾದ ಅರ್ಜಿಗಳ ಸಂಖ್ಯೆ ಎಷ್ಟು;